

ಮೈಮರೆಯುತ್ತಿದ್ದಳು. ಉಳಿದಂತೆ ಮನೆಗೆಲಸಗಳಲ್ಲಿ ತಾಯಿಗೆ ನೆರವಾಗುತ್ತಿದ್ದಳು. ಪಾತ್ರೆ ತೊಳೆಯುವುದು, ಬಟ್ಟೆಬರೆ ಶುಚಿಮಾಡುವುದು; ಸಾಕಿದ್ದ ಹಸು ಕರು ಬಾತುಕೋಳಿಗಳ ಪಾಲನೆ ಮಾಡುವುದು; ಕುಡಿಯುವನೀರನ್ನು ಅನತಿದೂರದಿಂದ ಹೊತ್ತು ತರುವುದು; ತಮ್ಮ–ತಂಗಿಯರನ್ನು ಸಿದ್ಧಮಾಡಿ ಶಾಲೆಗೆ ಕಳಿಸುವುದು– ಹೀಗೆ ಬೆಳಿಗ್ಗೆ 4 ಗಂಟೆಯಿಂದ ರಾತ್ರಿ 11 ಗಂಟೆವರೆಗೆ ಕೆಲಸ ಮಾಡುತ್ತಿದ್ದಳು. ಈ ಎಲ್ಲ ಕೆಲಸಗಳನ್ನೂ 'ತನ್ನ ಇಷ್ಟದೈವನಾದ ಕೃಷ್ಣನ ಕೆಲಸ' ಎಂಬ ಭಾವದಿಂದ ಮಾಡುತ್ತಿದ್ದಳು. ಬಟ್ಟೆ ಒಗೆಯುತ್ತಾ, 'ಇದು ಕೃಷ್ಣನ ಪೀತಾಂಬರ' ಎಂದೂ, ಅಡುಗೆ ಮಾಡುವಾಗ, 'ನನ್ನ ಕೃಷ್ಣ ಇಂದು ನಮ್ಮ ಮನೆಗೆ ಬರುವನು,' ಎಂದೂ ಭಾವಿಸಿಕೊಳ್ಳುತ್ತಿದ್ದಳು. 'ದೇವರೆ, ನಾನು ಇದು ಕೊಡುತ್ತೇನೆ, ನೀನು ಅದು ಕೊಡು,' ಎನ್ನುವುದು ಭಕ್ತಿಯಲ್ಲ, ವ್ಯಾಪಾರ' ಎನ್ನುವ ಅಮ್ಮ ನಿಷ್ಕಾಮಭಾವ ಹೇಗಿರುತ್ತದೆ ಎಂದು ಬಾಲ್ಯದಲ್ಲೇ ತೋರಿಸಿಕೊಟ್ಟರು.

ಇಂದು ಅಮ್ಮ ಹೇಳುವರು: 'ಮಕ್ಕಳೆ, ಒಂದು ಕೈಯ್ಯಿಗೆ ಪೆಟ್ಟಾದರೆ ಅದನ್ನು ಸವರಲು ಇನ್ನೊಂದು ಕೈಯ್ಯಿ ಕೂಡಲೆ ಮುಂದಾಗುತ್ತದೆ. ಅಲ್ಲವೆ? ಅದೇ ರೀತಿ, ನಾವೂ ಇನ್ನೊಬ್ಬರಿಗೆ ಸಹಾಯ ಸಾಂತ್ವನ ನೀಡಲು ಮುಂದಾಗಬೇಕು.' ಅಂದು ಅಮ್ಮ ನೆರೆಮನೆಗಳಿಗೆ ಹೋಗಿ, ವೃದ್ಧರನ್ನು ರೋಗಿಗಳನ್ನು ಕಂಡು ಮಾತಾಡಿಸಿ, ಅವರ ಮನಸ್ಸಿಗೆ ಸಮಾಧಾನ ನೀಡುತ್ತಿದ್ದರು. ಅವರಿಗೆ ಬಿಸಿನೀರಿನಲ್ಲಿ ಸ್ನಾನ ಮಾಡಿಸಿ, ಒಗೆದ ಬಟ್ಟೆ ತೊಡಿಸುತ್ತಿದ್ದರು. ಎಣ್ಣೆ ಹಚ್ಚಿ, ತಲೆ ಬಾಚಿಕೊಡುತ್ತಿದ್ದರು. ಬಿಸಿ ಊಟ ತಿನ್ನಿಸಿ, ಔಷಧ ಕೊಡುತ್ತಿದ್ದರು. ಬಟ್ಟೆ ಒಗೆದುಕೊಡುತ್ತಿದ್ದರು. ಊರಾಚೆ ಇದ್ದ ಬಡವರ ಕೇರಿಗಳಿಗೂ ಹೋಗಿ ಆಹಾರವನ್ನು ಕೊಟ್ಟುಬರುತ್ತಿದ್ದರು.

ಒಮ್ಮೆ 'ಮಗಳು ತಾಯಿಯ ಚಿನ್ನದ ಓಲೆಯನ್ನು ಕಳೆದಿದ್ದಾಳೆ,' ಎಂಬ ಕಾರಣಕ್ಕೆ ತಂದೆಯು ಸುಧಾಮಣಿಯನ್ನು ಒಂದು ತೆಂಗಿನಮರಕ್ಕೆ ಕಟ್ಟಿಹಾಕಿ ಹೊಡೆದರು. ಸುಧಾಮಣಿಯು ಒಡವೆಯನ್ನು ತಾನು ಏನು ಮಾಡಿದೆ? ಯಾರಿಗೆ ಕೊಟ್ಟೆ? ಎಂದು ಮಾತ್ರ ಬಾಯಿಬಿಡಲಿಲ್ಲ. ಬದಲಿಗೆ, 'ಬಡವರು ಹಸಿದುಕೊಂಡಿರುವಾಗ ನಮ್ಮ ಬಳಿ ಚಿನ್ನದ ಆಭರಣ ಇದ್ದೂ ಏನು ಪ್ರಯೋಜನ?' ಎಂಬ ಮರುಪ್ರಶ್ನೆಯ ಮೂಲಕ ಅಸಾಮಾನ್ಯ ಸಾಮಾಜಿಕ ಕಳಕಳಿಯನ್ನು ಅಂದೇ ಪ್ರಕಟಿಸಿದಳು.

ಇಂದಿಗೂ ಅಮ್ಮ ಹೇಳುವರು, '500 ರುಪಾಯಿಯ ವಾಚಾಗಲೀ 5 ಲಕ್ಷ ರುಪಾಯಿಯ ವಾಚಾಗಲೀ– ಎರಡೂ ತೋರಿಸುವುದು ಸಮಯವನ್ನೇ. ಮಕ್ಕಳೆ, ನಾವು 500 ರುಪಾಯಿಯ ವಾಚನ್ನು ತೆಗೆದುಕೊಂಡು ಉಳಿದ ಹಣವನ್ನು ಬಡವರ ಉದ್ಧಾರಕ್ಕೆ ಬಳಸುವ ಮನೋಭಾವ ಬೆಳೆಸಿಕೊಳ್ಳಬೇಕು.'

## ಸಾಧನಾಲೀಲೆ

ಅಮ್ಮನ ಜೀವನವು 'ಆಧುನಿಕ ಕಾಲದಲ್ಲಿಯೂ ಆತ್ಮಾನ್ವೇಷಣೆಯು ಸಾಧ್ಯವಿದೆ' ಎನ್ನುವುದಕ್ಕೆ ಸಾಕ್ಷಿ ಎಂಬಂತಿದೆ.

ಆಧ್ಯಾತ್ಮ ಜೀವಿಗಳ ವಿಷಯದಲ್ಲಿ ಅಂತರ್ಮುಖತೆ, ಧ್ಯಾನ, ತಪಸ್ಸು, ಸಾಧನೆ –ಇವು ಸಹಜವಾಗಿ ಸ್ಫುರಿಸುತ್ತವೆ. ಬಾಲಕಿ ಸುಧಾಮಣಿಯ ಪ್ರೇಮಭಕ್ತಿಯು ಪರಾಕಾಷ್ಠೆಯನ್ನು ಮುಟ್ಟಿತು. ಆಗಾಗ ಉನ್ಮತ್ತ ಭಕ್ತಿಯಲ್ಲಿ ಲೀನಳಾಗುತ್ತಿದ್ದಳು. ಇದುವರೆಗೆ ಬಾಲಕಿಯ ಸುಶ್ರಾವ್ಯ ಗಾಯನವೇನೋ ಗ್ರಾಮಸ್ಥರ ಮನಸೂರೆಗೊಂಡಿತ್ತು, ಆದರೆ ಅವಳ ಭಕ್ತಿಭಾವಗಳು ಮಾತ್ರ 'ಆಧ್ಯಾತ್ಮ' ತಿಳಿಯದ ಅವರಿಗೆ ಅರ್ಥವಾಗದೆ, 'ಅವಳೊಬ್ಬ ವಿಚಿತ್ರ ಹುಡುಗಿ' ಎಂದುಕೊಳ್ಳುತ್ತಿದ್ದರು.

ಕೆಲವು ಸಲ ಸುಧಾಮಣಿಯು ದಿವ್ಯೋನ್ಮಾದದಿಂದ ಭಜನೆ ಹಾಡುತ್ತಿದ್ದಳು, ಆನಂದ ನರ್ತನ ಮಾಡುತ್ತಿದ್ದಳು. ಮತ್ತೆ ಕೆಲವು ಸಲ ಇಷ್ಟದೈವದಿಂದ ಅಗಲಿಕೆಯನ್ನು ಭಾವಿಸಿಕೊಂಡು, ತಾನು ವಿರಹಾಗ್ನಿಯಲ್ಲಿ ಬೇಯುತ್ತಿರುವಂತೆ, 'ಕೃಷ್ಣಾ, ನೀನೆಲ್ಲಿ? ಓ ಕೃಷ್ಣ, ಬಾ. ಈ ನಿನ್ನ ಮಗುವನ್ನು ಕಾಪಾಡು!' ಎಂದು ಮೊರೆಯಿಟ್ಟು ಕೂಗುತ್ತಿದ್ದಳು. ಕಾಲ ಸರಿದಂತೆ ಭಕ್ತಿಸಾಧನೆ ಸಂಪನ್ನವಾಯಿತು.

ಅಲ್ಲಿಂದ ಮುಂದೆ ಸುಧಾಮಣಿಯ ಸಾಧನಾಲೀಲೆಯು ಅದ್ವೈತಾವಸ್ಥೆಯ ದಿಕ್ಕಿನಲ್ಲಿ ಹರಿಯಿತು. ಬಾಹ್ಯದ ಪರಿವೆಯೇ ಇಲ್ಲವಾಗಿ

'ಪ್ರೇಮವೇ ಎಲ್ಲಕ್ಕೂ ಮದ್ದು. ಎಲ್ಲರ ಹೃದಯದಲ್ಲಿ ಈ ದಿವ್ಯಗುಣವು ಅಂತರ್ಗತವಾಗಿದೆ. ಈ ಪ್ರೇಮವನ್ನು ನಾವು ಜಾಗೃತಮಾಡಿಕೊಳ್ಳಬೇಕಿದೆ. ಹೃದಯದಲ್ಲಿ ಜಾಗೃತವಾದ ಪ್ರೇಮವು ಕುಟುಂಬಕ್ಕೂ, ಸಮಾಜಕ್ಕೂ, ದೇಶಕ್ಕೂ, ಇಡೀ ಪ್ರಪಂಚಕ್ಕೂ ವಿಸ್ತರಿಸಬೇಕು.'

